30653 **M-568**

Sl.No. 0500 Total No. of Pages : 8

# I Semester B.B.A. Examination, October/November-2018
## (Semester Scheme : BBA 2017)
## (Freshers of Nov./Dec. 2017 and onwards)
# FINANCIAL ACCOUNTING-I

**Time : 3 Hours** **Max. Marks : 70**

***Instruction :*** *Answer all parts.*

ಎಲ್ಲಾ ಭಾಗಗಳಿಗೂ ಉತ್ತರಿಸಿ.

## PART - A
## ಭಾಗ – ಎ

Answer any two questions. 20 marks each.

ಯಾವುದಾದರೂ 2 ಪ್ರಶ್ನೆಗಳಿಗೆ ಉತ್ತರಿಸಿ. ತಲಾ 20 ಅಂಕಗಳು.

*Q1)* Explain accounting concepts and conventions.

ಲೆಕ್ಕ ಶಾಸ್ತ್ರದ ಪರಿಭಾವನೆ ಮತ್ತು ಆಚರಣೆಗಳನ್ನು ವಿವರಿಸಿ.

*Q2)* From the following Trial balance of Sri Rama Limited as on 31-3-2017, you are required to prepare the trading and profit and loss account and also a balance sheet.

| Particulars | Dr. Rs. | Cr. Rs. |
|---|---|---|
| Capital | - | 3,20,000 |
| Drawings | 24,000 | - |
| Sales | - | 4,80,000 |
| Purchases | 3,28,000 | - |
| Return inwards | 8,000 | - |
| Freight | 8,000 | - |
| Carriage outwards | 8,000 | - |
| Rent, rates & taxes | 2,000 | - |

*P.T.O.*

| | | |
|---|---|---|
| Trade expenses | 21,600 | - |
| Sundry Creditors | - | 40,000 |
| Sundry Debtors | 80,000 | - |
| Discount | - | 3,200 |
| Return outwards | - | 4,000 |
| Postage | 3,200 | - |
| Reserve for bad debts | - | 1,600 |
| Rent received | - | 4,800 |
| Insurance charges | 2,800 | - |
| Salaries and wages | 85,200 | - |
| Cash in hand | 1,02,800 | - |
| Plant and machinery | 1,12,000 | - |
| Stock on 1-4-2016 | 60,000 | - |
| Furniture | 8,000 | - |
| Total | 8,53,600 | 8,53,600 |

Adjustments:

1) Closing stock Rs. 50,400
2) Write off bad debts Rs. 2,400
3) Provide R.B.D. at 5% on sundry debtors.
4) Create reserve for discount on creditors at 2%
5) Depreciate machinery at 10%
6) Insurance prepaid Rs. 400
7) A fire occurred in the godown on 28th March 2017, goods worth Rs. 20,000 was destroyed. The insurance company admitted the claim in full.





ಈ ಕೆಳಗೆ ಕೊಟ್ಟಿರುವ ಶ್ರೀರಾಮ ಲಿಂ. ರವರ ತಾಳೆಪಟ್ಟಿಯಿಂದ ದಿನಾಂಕ 31–3–2017 ಕ್ಕೆ ಅಂತಿಮವಾದ ವರ್ಷಕ್ಕೆ ವ್ಯಾಪಾರಖಾತೆ, ಲಾಭ ಮತ್ತು ನಷ್ಟಖಾತೆ ಹಾಗೂ ಆಸ್ತಿ ಹೊಣೆ ಪಟ್ಟಿಯನ್ನು ತಯಾರಿಸಿ.

| ವಿವರಗಳು. | ಖರ್ಚು. ರೂ. | ಜಮಾ. ರೂ. |
|---|---|---|
| ಬಂಡವಾಳ | - | 3,20,000 |
| ಸ್ವಂತ ವೆಚ್ಚ | 24,000 | - |
| ಮಾರಾಟ | - | 4,80,000 |
| ಖರೀದಿ | 3,28,000 | - |
| ಮಾರಾಟ ವಾಪಸಾತಿ | 8,000 | - |
| ಸಾಗಾಣಿಕೆ–ಖರೀದಿ ಮೇಲೆ | 8,000 | - |
| ಮಾರಾಟ ಸಾಗಾಣಿಕೆ | 8,000 | - |
| ಬಾಡಿಗೆ, ಸುಂಕ ಮತ್ತು ತೆರಿಗೆ | 2,000 | - |
| ವ್ಯಾಪಾರ ವೆಚ್ಚಗಳು | 21,600 | - |
| ಸಾಹುಕಾರರು (ಧನಿಗಳು) | - | 40,000 |
| ಸಾಲಗಾರರು (ಋಣಿಗಳು) | 80,000 | - |
| ಸೋಡಿ | - | 3,200 |
| ಖರೀದಿ ವಾಪಸಾತಿ | - | 4,000 |
| ಅಂಚೆ ವೆಚ್ಚ | 3,200 | - |
| ಕರಡು ಸಾಲ ನಿಧಿ | - | 1,600 |
| ಬಾಡಿಗೆ ಪಡೆದಿದ್ದು | - | 4,800 |
| ವಿಮೆ | 2,800 | - |
| ಸಂಬಳ ಮತ್ತು ಕೂಲಿ | 85,200 | - |
| ನಗದು | 1,02,800 | - |
| ಸ್ಥಾವರ ಯಂತ್ರ | 1,12,000 | - |
| ಸರಕು–1–4–2016 | 60,000 | - |
| ಪೀಠೋಪಕರಣ | 8,000 | - |
| ಒಟ್ಟು | 8,53,600 | 8,53,600 |

ಹೊಂದಾಣಿಕೆಗಳು:

1) ಅಂತಿಮ ಸರಕು ರೂ. 50,400
2) 2,400 ರೂ. ಗಳನ್ನು ಕರಡು ಸಾಲವೆಂದು ಪರಿಗಣಿಸಿರಿ.
3) ಸಾಲಗಾರರ ಮೇಲೆ ಶೇ. 5 ರಷ್ಟು ಕರಡು ಸಾಲ ನಿಧಿ ತೆಗೆಯಿರಿ.
4) ಸಾಹುಕಾರರ ಮೇಲೆ ಶೇ. 2 ಸೋಡಿ ನಿಧಿ ತೆಗೆಯಿರಿ.
5) ಯಂತ್ರಗಳ ಮೇಲೆ ಶೇ. 10 ರಷ್ಟು ಸವಕಳಿ ತೆಗೆಯಿರಿ.
6) ಮುಂಗಡ ಕೊಟ್ಟ ವಿಮೆ ರೂ. 400
7) ದಿನಾಂಕ 28–3–2017 ರಂದು ಉಗ್ರಾಣದಲ್ಲಿ ಬೆಂಕಿಯಿಂದ ರೂ. 20,000 ಸರಕು ನಷ್ಟವಾಗಿದೆ. ಈ ನಷ್ಟವನ್ನು ವಿಮಾ ಕಂಪನಿಯು ಪೂರ್ಣವಾಗಿ ಭರಿಸಲು ಒಪ್ಪಿದೆ.

*Q3)* Srinivasa Ltd. purchased 'A' machine on 1-1-2015 for Rs. 15,00,000. He purchased another machine 'B' on 1-10-2015 by payment of Rs. 4,00,000. On 1st April 2016, 'C' machine was bought and installed at a cost of Rs. 10,00,000. On 30th Sept. 2017, he sold 'B' machine which was purchased on 1-10-2015 for Rs. 2,00,000.

He installed a new machine 'D' on 1st July 2018 costing Rs. 7,00,000.

The company decided to depreciate machines at 20% p.a. under straight line method.

Show machinery a/c and depreciation a/c for 4 years.

ಶ್ರೀನಿವಾಸ ಲಿಮಿಟೆಡ್ ರವರು 'ಎ' ಯಂತ್ರವನ್ನು 1-1-2015 ರಂದು ರೂ. 15,00,000 ಕ್ಕೆ ಖರೀದಿಸಿದ್ದಾರೆ. ಅವರು 1-10-2015 ರಂದು 'ಬಿ' ಎಂಬ ಮತ್ತೊಂದು ಯಂತ್ರವನ್ನು ರೂ. 4,00,000 ಖರೀದಿಸಿದ್ದಾರೆ.

1-4-2016 ರಂದು 'ಸಿ' ಯಂತ್ರವನ್ನು ಖರೀದಿಸಿ ರೂ. 10,00,000 ಕ್ಕೆ ಜೋಡಿಸಲಾಗಿದೆ. ದಿನಾಂಕ. 1-10-2015 ರಂದು ಖರೀದಿಸಿದ 'ಬಿ' ಯಂತ್ರವನ್ನು 30-9-2017 ರಂದು ರೂ. 2,00,000 ಗಳಿಗೆ ಮಾರಾಟ ಮಾಡಲಾಯಿತು.

1-7-2018 ರಂದು 'ಡಿ' ಎಂಬ ಹೊಸ ಯಂತ್ರವನ್ನು ರೂ. 7,00,000 ಕ್ಕೆ ಖರೀದಿಸಿ ಜೋಡಿಸಲಾಯಿತು. ಕಂಪನಿಯು ಯಂತ್ರಗಳನ್ನು ಸಾಲಿಯಾನ ಶೇ. 20 ರಂತೆ ನೇರ ಸವಕಳಿ ಪದ್ಧತಿಯಲ್ಲಿ ಸವಕಳಿ ತೆಗೆಯಲು ನಿರ್ಧರಿಸಿದರು.

ಯಂತ್ರ ಖಾತೆಯನ್ನು ಮತ್ತು ಸವಕಳಿ ಖಾತೆಯನ್ನು 4 ವರ್ಷಗಳಿಗೆ ತೋರಿಸಿ.

*Q4)* On 1st July 2017 Vishnu Traders of Bengaluru consigned 100 cases of toys to Shiva Traders of Mysuru. The cost of consignment amounted Rs.15,000, but the goods were charged at invoice price so as to show a profit of 25% on cost. The consignor paid Rs. 1,200 towards freight and insurance. An acceptance for Rs. 6,000 was received from the consignee. The consignee paid Rs.2,000 towards unloading and Rs. 400 towards carriage. 10 cases were lost in transit and Rs. 1,000 was received from the insurance company by the consignor in full settlement of the claims. The consignee sold 80 cases for Rs. 24,000. The consignee is entitled to a commission of 5% on sale proceeds. The consignee enclosed a bank draft for the balance due.

Prepare necessary ledger accounts in the books of Vishnu Traders.





ದಿನಾಂಕ 1-7-2017 ರಂದು ಬೆಂಗಳೂರಿನ ವಿಷ್ಣು ಟ್ರೇಡರ್ಸ್ ರವರು 100 ಪೆಟ್ಟಿಗೆ ಆಟಿಕೆಗಳನ್ನು ಮೈಸೂರಿನ ಶಿವ ಟ್ರೇಡರ್ಸ್ ರವರಿಗೆ ಸರಕು ರವಾನೆ ಪದ್ಧತಿಯಲ್ಲಿ ಕಳುಹಿಸಿದರು. ಈ ಸರಕಿನ ವೆಚ್ಚ ಬೆಲೆ ರೂ. 15,000 ಆಗಿದ್ದು, ಇದನ್ನು ವೆಚ್ಚ ಬೆಲೆಯ ಶೇ. 25 ರ ಲಾಭದಲ್ಲಿ ಮಾದರಿ ವಿಕ್ರಯ ಪಟ್ಟಿಯಲ್ಲಿ ತೋರಿಸಲಾಯಿತು. ಸರಕು ರವಾನೆದಾರನು, ಸಾಗಣೆ ವೆಚ್ಚ ಮತ್ತು ವಿಮೆಗೆ ರೂ. 1,200 ಪಾವತಿಸಿದನು. ರೂ. 6,000 ಗಳ ಒಂದು ಹುಂಡಿಯನ್ನು ಶಿವ ಟ್ರೇಡರ್ಸ್‌ರವರಿಂದ ಪಡೆದರು. ಶಿವ ಟ್ರೇಡರ್ಸ್‌ರವರು ಸಾಗಣೆ ವೆಚ್ಚ ರೂ. 400 ಮತ್ತು ಸರಕು ಇಳಿಸುವ ವೆಚ್ಚ ರೂ. 2,000 ಪಾವತಿಸಿದರು. 10 ಪೆಟ್ಟಿಗೆಯು ಸಾಗಾಣಿಕೆಯಲ್ಲಿರುವಾಗ ಕಳೆದಿದ್ದು, ಅದರ ಬಾಬ್ತು ವಿಮಾ ಕಂಪನಿಯವರಿಂದ ರೂ. 1,000 ಪಡೆಯಲಾಯಿತು. ಶಿವ ಟ್ರೇಡರ್ಸ್‌ರವರು 80 ಪೆಟ್ಟಿಗೆಗಳನ್ನು ರೂ. 24,000 ನಗದಿಗೆ ಮಾರಾಟ ಮಾಡಿದರು. ಅವರು ಮಾರಾಟ ಬೆಲೆಯ ಮೇಲೆ ಶೇ. 5 ಕಮಿಷನ್ ಪಡೆಯಲು ಅರ್ಹರಿರುತ್ತಾರೆ ಮತ್ತು ಉಳಿಕೆ ಹಣವನ್ನು ಬ್ಯಾಂಕ್ ಡ್ರಾಫ್ಟ್ ಮುಖಾಂತರ ಕಳುಹಿಸಿ ಕೊಡುತ್ತಾರೆ.

ವಿಷ್ಣು ಟ್ರೇಡರ್ಸ್ ರವರ ಪುಸ್ತಕದಲ್ಲಿ ಅಗತ್ಯವಾದ ಖಾತೆಗಳನ್ನು ತಯಾರಿಸಿ.

## PART - B

## ಭಾಗ-ಬಿ

Answer any two questions. 10 marks each.

ಯಾವುದಾದರೂ ಎರಡು ಪ್ರಶ್ನೆಗಳಿಗೆ ಉತ್ತರಿಸಿ. ತಲಾ 10 ಅಂಕಗಳು.

*Q5)* Journalise the following transactions in the books of Sri Krishna.

2017

| | | |
|---|---|---|
| Sept | 1. | Started business with the following: Cash in hand Rs.40,000 Cash at Bank Rs. 70,000, Goods in hand Rs. 1,00,000, Furniture Rs.10,000, Buildings Rs. 2,40,000. |
| " | 4. | Purchased a motor car paid in cash Rs.40,000 and by cheque Rs. 20,000. |
| " | 7. | Cash sales paid into bank Rs. 30,000 |
| " | 9. | Bought goods from Balaji Traders Ltd. Rs.30,000 for cash. |
| " | 15. | Bought goods from Arjun on account Rs. 1,00,000 |
| " | 24. | Sold goods to Venkatesh on account Rs. 30,000 |
| " | 27. | Received cheque from Venkatesh Rs. 29,000 in full settlement of his A/c. |
| " | 30. | Paid Arjun Rs. 99,500 in full settlement of his A/c. |

ಈ ಕೆಳಕಂಡ ವ್ಯವಹಾರಗಳನ್ನು ಶ್ರೀಕೃಷ್ಣ ಅವರ ಪುಸ್ತಕದಲ್ಲಿ ಬರೆಯಿರಿ.

ದಿನಾಂಕ 2017

ಸೆಪ್ಟೆಂಬರ್ 1. ನಗದು ರೂ. 40,000, ಬ್ಯಾಂಕಿನಲ್ಲಿ ನಗದು ರೂ. 70,000, ಸರಕು ರೂ. 1,00,000 ಪೀಠೋಪಕರಣ ರೂ. 10,000, ಕಟ್ಟಡ ರೂ. 2,40,000 ಗಳೊಂದಿಗೆ ವ್ಯಾಪಾರವನ್ನು ಅವರು ಪ್ರಾರಂಭಿಸಿದರು.

" 4. ಮೋಟಾರು ಕಾರನ್ನು ರೂ. 40,000 ಗಳ ನಗದು ಹಾಗೂ ಚೆಕ್ಕು ರೂ. 20,000 ಗಳ ಮೂಲಕ ಖರೀದಿಸಲಾಯಿತು.

" 7. ನಗದು ಮಾರಾಟದ ಹಣವನ್ನು ಬ್ಯಾಂಕಿಗೆ ಕಟ್ಟಿದ್ದು ರೂ. 30,000

" 9. ಬಾಲಾಜಿ ಟ್ರೇಡರ್ಸ್ ಲಿಮಿಟೆಡ್ ದಿಂದ ಸರಕುಗಳು ಕೊಂಡಿದ್ದು ರೂ. 30,000 ನಗದು ಮೂಲಕ.

" 15. ಅರ್ಜುನ್ ಅವರಿಂದ ಸರಕನ್ನು ಕೊಂಡದ್ದು ರೂ. 1,00,000

" 24. ವೆಂಕಟೇಶ್ ಅವರಿಗೆ ಸರಕು ಮಾರಿದ್ದು ರೂ. 30,000

" 27. ವೆಂಕಟೇಶ್ ಅವರಿಂದ ರೂ. 29,000 ಗಳ ಧನಾದೇಶವನ್ನು ಸಂಪೂರ್ಣವಾಗಿ ಸಂದಾಯವಾದಂತೆ ಪಡೆಯಲಾಗಿದೆ.

" 30. ಅರ್ಜುನ್ ಅವರಿಗೆ ರೂ. 99,500 ಗಳ ಪೂರ್ಣ ಸಂದಾಯವಾದಂತೆ ನೀಡಲಾಗಿದೆ.

***Q6)*** Enter the following transactions in three column cash book.

2017

August 1. Opening balance

Cash Rs. 70,000

Bank Rs. 30,000

" 3. Paid into bank Rs. 5,000

" 4. Sold goods for cash Rs.10,000

" 8. Paid Ananth Rs. 6,000 and was allowed a discount of Rs. 600

" 10. Bought furniture and paid by cheque Rs. 3,000

" 17. Received from Lakshmi a cheque for Rs. 6,900 and allowed a discount of Rs. 100 the cheque was deposited into bank.

" 19. Withdrew from bank for office use Rs. 10,000.

" 30. Drew for personal use cash Rs. 1,000

" 31. Salaries paid Rs. 5,000.





ಈ ಕೆಳಗಿನ ವ್ಯವಹಾರಗಳನ್ನು ಮೂರು ಅಂಕಣದ ನಗದು ಪುಸ್ತಕದಲ್ಲಿ ದಾಖಲಿಸಿ.

2017

ಆಗಸ್ಟ್ 1. ಪ್ರಾರಂಭಶಿಲ್ಕು:

ನಗದು ರೂ. 70,000

ಬ್ಯಾಂಕು ರೂ. 30,000

" 3. ಬ್ಯಾಂಕಿಗೆ ಪಾವತಿಸಿದ್ದು ರೂ. 5,000

" 4. ನಗದಿಗೆ ಸರಕು ಮಾರಾಟ ರೂ .10,000

" 8. ಶ್ರೀ ಅನಂತ್ ರವರಿಗೆ ರೂ. 6,000 ಗಳನ್ನು ಪಾವತಿಸಿ ಅವರಿಗೆ ರೂ. 600 ಸೋಡಿ ನೀಡಲಾಯಿತು.

" 10. ಪೀಠೋಪಕರಣ ಖರೀದಿಸಿ ಚೆಕ್ ಮೂಲಕ ಪಾವತಿಸಿದ್ದು ರೂ. 3,000

" 17. ಶ್ರೀಲಕ್ಷ್ಮೀಯವರಿಂದ ರೂ. 6,900 ಕ್ಕೆ ಚೆಕ್ ಪಡೆದು ಬ್ಯಾಂಕಿಗೆ ಜಮಾ ಮಾಡಲಾಯಿತು ಹಾಗೂ ರೂ. 100 ಸೋಡಿ ನೀಡಲಾಯಿತು.

" 19. ಕಛೇರಿ ಉಪಯೋಗಕ್ಕಾಗಿ ಬ್ಯಾಂಕಿನಿಂದ ತಂದ ಹಣ ರೂ. 10,000.

" 30. ಸ್ವಂತಕ್ಕಾಗಿ ಪಡೆದ ನಗದು ಹಣ ರೂ . 1,000

" 31. ಸಂಬಳ ಪಾವತಿಸಿದ್ದು ರೂ. 5,000.

***Q7)*** On 1st August 2017 Hanuman drew a 3 months bill on Ganesh for Rs. 1,20,000. After acceptance, the bill was discounted with his banker at 6% P.A. The bill was dishonoured on the due date. Fresh bill was drawn and accepted for Rs.1,24,000.

Pass the necessary journal entries in the books of Hanuman and Ganesh.

ದಿನಾಂಕ 1 ಆಗಸ್ಟ್ 2017 ರಲ್ಲಿ ಹನುಮನ್ ರವರು ಗಣೇಶ್‌ರವರ ಮೇಲೆ 3 ತಿಂಗಳುಗಳ ಹುಂಡಿಯನ್ನು ರೂ. 1,20,000 ಕ್ಕೆ ಬರೆದಿದ್ದಾರೆ. ಹುಂಡಿಯನ್ನು ಒಪ್ಪಿದ ನಂತರ ಅದನ್ನು ಅವರ ಬ್ಯಾಂಕಿನಲ್ಲಿ ವಾರ್ಷಿಕ ಶೇ. 6 ರಂತೆ ಸೋಡೀಕರಿಸಲಾಗಿದೆ. ವಾಯಿದೆ ದಿನದಂದು ಹುಂಡಿಯು ತಿರಸ್ಕೃತಗೊಂಡಿದೆ. ರೂ. 1,24,000 ದ ಹೊಸಹುಂಡಿಯನ್ನು ಒಪ್ಪಿಕೊಳ್ಳಲಾಗಿದೆ. ಹನುಮನ್ ಮತ್ತು ಗಣೇಶ್ ರವರ ಪುಸ್ತಕದಲ್ಲಿ ಸಂಬಂಧಪಟ್ಟ ರೋಜು ದಾಖಲೆಗಳನ್ನು ಬರೆಯಿರಿ.

***Q8)*** Write the format of any five subsidiary books.

ಯಾವುದಾದರೂ ಐದು ಸಹಾಯಕ ಪುಸ್ತಕಗಳ ನಮೂನೆಗಳನ್ನು ಬರೆಯಿರಿ.

## PART - C

## ಭಾಗ - ಸಿ

Answer any two questions. 5 marks each.

ಯಾವುದಾದರೂ ಎರಡು ಪ್ರಶ್ನೆಗಳಿಗೆ ಉತ್ತರಿಸಿ. ತಲಾ 5 ಅಂಕಗಳು.

*Q9)* State any five Indian Accounting standards.

ಭಾರತೀಯ ಲೆಕ್ಕಶಾಸ್ತ್ರದ ಐದು ಮಾನದಂಡಗಳನ್ನು ತಿಳಿಸಿರಿ.

*Q10)* What are the causes of depreciation?

ಸವಕಳಿಗೆ ಕಾರಣಗಳನ್ನು ತಿಳಿಸಿ.

*Q11)* Draft a format of Account sales with imaginary figures.

ಮಾರಾಟಧ ಲೆಕ್ಕದ ನಮೂನೆಯನ್ನು ಕಲ್ಪಿತ ವಿವರಗಳೊಂದಿಗೆ ತಯಾರಿಸಿ.

*Q12)* State the features of a bill of exchange.

ವಿನಿಮಯ ಹುಂಡಿಯ ಲಕ್ಷಣಗಳನ್ನು ತಿಳಿಸಿ.

❖ ❖ ❖